# D.El.Ed

# Question Paper

Code No. : **322-EK**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು, 560 003**

**KARNATAKA SECONDARY EDUCATION EXAMINATION BOARD, MALLESHWARAM, BENGALURU, 560 003**

# ಪ್ರಥಮ ವರ್ಷದ ಡಿ.ಎಲ್.ಇಡಿ. ಮುಖ್ಯ ಪರೀಕ್ಷೆ, ಜುಲೈ, 2022

# First Year D.El.Ed. Main Examination, July, 2022

| | | |
|---|---|---|
| Subject / ವಿಷಯ | : | **Educational Assessment & Evaluation ಶೈಕ್ಷಣಿಕ ಮೌಲ್ಯಾಂಕನ ಮತ್ತು ಮೌಲ್ಯಮಾಪನ** |
| Date of Exam. / ಪರೀಕ್ಷೆಯ ದಿನಾಂಕ | : | 09. 07. 2022 |
| Maximum Marks / ಗರಿಷ್ಠ ಅಂಕಗಳು | : | 30 |
| Duration of Exam. / ಪರೀಕ್ಷೆ ಅವಧಿ | : | 1 Hour 30 Minutes / 1 ಗಂಟೆ 30 ನಿಮಿಷಗಳು |
| Time / ಸಮಯ | : | 10.00 A.M. to 11.30 A.M. |

## ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು / *General Instructions to the Candidates :*

1. ಅಭ್ಯರ್ಥಿಗಳು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಿರುವಂತೆಯೇ ಉತ್ತರ-ಪುಸ್ತಿಕೆಯಲ್ಲಿ ನೀಡಿರುವ ನಿಗದಿತ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯಿರಿ.
   Candidates should write their Register Number on the Answer Booklet as printed in their admission ticket.
2. ಅಭ್ಯರ್ಥಿಗಳು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ಮುಖ್ಯ ಉತ್ತರ-ಪುಸ್ತಿಕೆಯ ಕ್ರಮ ಸಂಖ್ಯೆಯನ್ನು ಬರೆಯತಕ್ಕದ್ದು.
   Candidates should write their Main Answer Booklet Number on the additional answer sheets in the space provided.
3. ಈ ಪ್ರಶ್ನೆಪತ್ರಿಕೆಯು ಆಂಗ್ಲ ಮತ್ತು ಕನ್ನಡ ಮಾಧ್ಯಮಗಳಲ್ಲಿ ಮುದ್ರಿತವಾಗಿದೆ. ಒಂದು ವೇಳೆ ಭಾಷಾಂತರಗೊಂಡ ಪ್ರಶ್ನೆಪತ್ರಿಕೆಯಲ್ಲಿ ವ್ಯತ್ಯಾಸ / ಸಂದೇಹವಿದ್ದಲ್ಲಿ ಆಂಗ್ಲ ಮಾಧ್ಯಮದಲ್ಲಿರುವ ಪ್ರಶ್ನೆಗಳು ಅಂತಿಮವೆಂದು ಪರಿಗಣಿಸತಕ್ಕದ್ದು.
   This Question Paper is printed in English and Kannada mediums. In case of any discrepancies / doubts in the translated language, question in English medium is considered as valid and final.
4. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
   This Question Paper has been sealed by reverse jacket. You have to cut on the right side to open the Question Paper at the time of commencement of the examination. Check whether all the pages of the Question Paper are intact.
5. ಅಭ್ಯರ್ಥಿಗಳು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೋಂದಣಿ ಸಂಖ್ಯೆ, ಗುರುತು ಹಾಗೂ ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ-ಪುಸ್ತಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidates should not write Register Number, mark, sign or any other information in the Answer Booklet except in the specified place. In case, it is found any information in the sheets of the answer scripts such answer scripts will not be considered for evaluation.
6. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidate found to be indulging in malpractice during examination and violating examination instructions, action will be taken against such candidate as per the examination rules and his / her Answer Booklet will not be considered for evaluation.
7. ಉತ್ತರ ಬರೆಯಲು ಕಪ್ಪು / ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸತಕ್ಕದ್ದು.
   Use black / blue ball point pen only to write the answers.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**




institutes.aglasem.com
aglasem.com

## (ಕನ್ನಡ ಮಾಧ್ಯಮ)

***ಸೂಚನೆಗಳು :*** i) ಪ್ರಶ್ನೆ ಪತ್ರಿಕೆಯು ಮೂರು ವಿಭಾಗಗಳನ್ನು ಒಳಗೊಂಡಿದೆ.

ii) **ಭಾಗ – I** ರಲ್ಲಿ 4 ವಸ್ತುನಿಷ್ಠ ಪ್ರಶ್ನೆಗಳಿದ್ದು, ಎಲ್ಲಾ ಪ್ರಶ್ನೆಗಳು ಕಡ್ಡಾಯ.

iii) **ಭಾಗ – II** ರಲ್ಲಿ ಲಘು ಉತ್ತರದ 5 ಪ್ರಶ್ನೆಗಳಿದ್ದು, ಯಾವುದಾದರೂ 3 ಪ್ರಶ್ನೆಗಳಿಗೆ ಉತ್ತರಿಸುವುದು.

iv) **ಭಾಗ – III** ರಲ್ಲಿ ದೀರ್ಘ ಉತ್ತರದ 6 ಪ್ರಶ್ನೆಗಳಿದ್ದು, ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸುವುದು.

v) ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಓದಿ ನಂತರ ಉತ್ತರಿಸುವುದು.

## ಭಾಗ – I

**ಈ ಕೆಳಗಿನ ಪ್ರಶ್ನೆಗಳಲ್ಲಿ ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ : 1 × 4 = 4**

1. ಈ ಕೆಳಗಿನ ಯಾವ ಮೌಲ್ಯಾಂಕನ ಪ್ರಕಾರ KWL ನಕ್ಷೆಗೆ ಉದಾಹರಣೆಯಾಗಿದೆ ?

   (A) ಸಂಕಲನಾತ್ಮಕ ಮೌಲ್ಯಾಂಕನ

   (B) ರೂಪಣಾತ್ಮಕ ಮೌಲ್ಯಾಂಕನ

   (C) ಸಾಧನಾ ಪರೀಕ್ಷೆ

   (D) ನೈದಾನಿಕ ಪರೀಕ್ಷೆ

2. ಮಗುವಿನ ಸರ್ವಾಂಗೀಣ ಬೆಳವಣಿಗೆಯಲ್ಲಿ ಪ್ರಮುಖ ವಾಹಿನಿಯಾಗಿರುವುದು ................. ಹಂತ.

   (A) ಉನ್ನತ ಶಿಕ್ಷಣ

   (B) ಪದವಿ ಶಿಕ್ಷಣ

   (C) ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

   (D) ವ್ಯಕ್ತಿಪರ ಶಿಕ್ಷಣ



institutes.aglasem.com
aglasem.com

3. ಘಂಟೆಯಾಕಾರದ ಸಮಮಿತಿ ಹೊಂದಿದ ನಕ್ಷೆಯು ……………….ನ್ನು ಸೂಚಿಸುತ್ತದೆ ?

(A) ಸಾಮಾನ್ಯ ಸಂಭಾವ್ಯ ವಕ್ರರೇಖೆ

(B) ಧನಾತ್ಮಕ ವಿಷಮತೆ

(C) ಸಾಮಾನ್ಯ ವಕ್ರರೇಖೆ

(D) ಋಣಾತ್ಮಕ ವಿಷಮತೆ

4. ವರ್ಗಕೋಣೆ, ಬೋಧನೆ, ಕಲಿಕೆ, ಆಡಳಿತ ಸುಧಾರಣೆಯಲ್ಲಿನ ಸಮಸ್ಯಾ ಪರಿಹಾರವನ್ನು ತಕ್ಷಣದಲ್ಲಿ ತಿಳಿಯಲು ಸಹಾಯಕವಾದುದು

(A) ಕ್ರಿಯಾ ಸಂಶೋಧನೆ

(B) ಶೈಕ್ಷಣಿಕ ಸಂಶೋಧನೆ

(C) ಪ್ರಾಯೋಗಿಕ ಸಂಶೋಧನೆ

(D) ವಿವರಣಾತ್ಮಕ ಸಂಶೋಧನೆ

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ : 2 × 3 = 6**

5. ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕಂಡುಬರುವ ಕಲಿಕಾ ಕೊಂಡಿಯ ಅಂಶಗಳನ್ನು ಸೂಚಿಸುವ ಚಿತ್ರವನ್ನು ಬರೆಯಿರಿ.

6. ಪಠ್ಯಕ್ರಮದಲ್ಲಿನ ವ್ಯಾಸಂಗಿಕವಲ್ಲದ ಕ್ಷೇತ್ರಗಳು ಯಾವುವು ? ಈ ಕ್ಷೇತ್ರಗಳು ಯಾವುವು ? ಈ ಕ್ಷೇತ್ರಗಳ ಮೌಲ್ಯಮಾಪನ ಮಾಡಲು ಯಾವ ತಂತ್ರಗಳನ್ನು ಬಳಸುವಿರಿ ?

7. ನೈದಾನಿಕ ಪರೀಕ್ಷೆ ಎಂದರೇನು ? ಅದರ ಅಗತ್ಯವನ್ನು ತಿಳಿಸಿ.

8. ಸಂದರ್ಶನ ತಂತ್ರವನ್ನು ಬಳಸುವ ಯಾವುದಾದರೂ ನಾಲ್ಕು ಸಂದರ್ಭಗಳನ್ನು ಪಟ್ಟಿಮಾಡಿ.

9. ಪ್ರಕ್ರಿಯಾ ಮಾಪನವನ್ನು ಅಳೆಯಲು ಬಳಸುವ ಸಾಧನಗಳನ್ನು ಪಟ್ಟಿಮಾಡಿ.



institutes.aglasem.com
aglasem.com

## ಭಾಗ – III

**ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ :** **5 × 4 = 20**

10. ಹೊಸ ಮೌಲ್ಯಮಾಪನ ತಂತ್ರಗಳನ್ನು ವಿನ್ಯಾಸಗೊಳಿಸುವುದಕ್ಕೆ ಸಂಬಂಧಿಸಿದಂತೆ ಪೌಲ್‌ರವರು ಮಾಡಿರುವ ಶಿಫಾರಸ್ಸುಗಳು ಯಾವುವು ?

11. ಕಲಿಕೆಯಲ್ಲಿ ವಿದ್ಯಾರ್ಥಿಗಳ ನ್ಯೂನತೆಯನ್ನು ತಿಳಿದ ನಂತರ ಶಿಕ್ಷಕ ಅಳವಡಿಸಿಕೊಳ್ಳಬಹುದಾದ ಪರಿಹಾರ ಕ್ರಮಗಳನ್ನು ವಿವರಿಸಿ.

12. ವಸ್ತುನಿಷ್ಠ ಪರೀಕ್ಷೆ ಎಂದರೇನು ? ವಸ್ತುನಿಷ್ಠ ಪ್ರಶ್ನೆಗಳಲ್ಲಿನ ವಿಧಗಳು ಯಾವುವು ?

13. ರೂಪಣಾತ್ಮಕ ಮೌಲ್ಯಮಾಪನ ಎಂದರೇನು ? ರೂಪಣಾತ್ಮಕ ಮೌಲ್ಯಮಾಪನವನ್ನು ಬಳಸುವುದರಿಂದ ಆಗುವ ಉಪಯೋಗಗಳೇನು ?

14. ಈ ಕೆಳಗೆ ಕೊಟ್ಟಿರುವ ಪ್ರಾಪ್ತಾಂಕಗಳ ಎರಡು ಸೆಟ್‌ಗಳನ್ನು ಆವರ್ತ ಬಹುಭುಜಾಕೃತಿಯನ್ನು ರಚಿಸಿ :

| ವರ್ಗಾಂತರ (ಅಂಕಗಳು) | ತರಗತಿ - *A* | ತರಗತಿ - *B* |
|---|---|---|
| 10 — 19 | 4 | 0 |
| 20 — 29 | 3 | 6 |
| 30 — 39 | 5 | 6 |
| 40 — 49 | 7 | 10 |
| 50 — 59 | 9 | 7 |
| 60 — 69 | 6 | 6 |
| 70 — 79 | 4 | 3 |
| 80 — 89 | 2 | 2 |

15. ಕಲಿಕಾರ್ಥಿಗಳ ಕಾರ್ಯಕ್ಷಮತೆಯನ್ನು ವಿಶ್ಲೇಷಿಸುವ ಹಾಗೂ ವರದಿ ಮಾಡುವ ಅಗತ್ಯತೆಯ ಕುರಿತಂತೆ ಚರ್ಚಿಸಿ.



institutes.aglasem.com
aglasem.com

**( English Medium )**

*Instructions :*

i) The question paper contains 3 parts.

ii) Part-I consists of 4 Objective type questions and *all* questions are compulsory.

iii) Part-II consists of 5 questions of Short answer type and the students should answer any *three*.

iv) Part-III consists of 6 questions of Long answer type and the students should answer any *four*.

v) Students are advised to read all the questions thoroughly, then start answering.

## PART – I

**Choose the correct alternatives for the following :** **1 × 4 = 4**

1. K.W.L. chart is an example for which of the following types of assessment ?

   (A) Summative assessment (B) Formative assessment

   (C) Achievement test (D) Diagnostic test.

2. Which stage plays an important role in the child's all-round development ?

   (A) Higher education (B) Degree education

   (C) Primary and secondary education (D) Vocational education.



institutes.aglasem.com
aglasem.com

3. Bell-shaped symmetrical curve represents

(A) Normal probability curve
(B) Positive skewness
(C) Normal curve
(D) Negative skewness.

4. Which helps in providing immediate remedy for the reformation in classroom transaction, teaching, learning and administration ?

(A) Action research
(B) Education research
(C) Applied research
(D) Descriptive research.

## PART – II

**Answer any *three* of the following questions : 2 × 3 = 6**

5. Draw the diagram which depicts the linkages between the components as well as the continuity existing in the process of evaluation.

6. Which are the non-intellectual areas in the curriculum ? What techniques do you follow while evaluating these areas ?

7. What is diagnostic test ? Mention its importance.

8. List any *four* situations in which the interview technique is used.

9. List the tools used to measure process evaluation.

## PART – III

**Answer any *four* of the following questions : 5 × 4 = 20**

10. What are the recommendations made by Paula for designing new evaluation strategies ?



institutes.aglasem.com
aglasem.com

11. Describe the remedial measures that the teacher can adopt in overcoming deficiency of learning among learners.

12. What is an objective type test ? Name the types of objective questions. Explain.

13. What is formative evaluation ? What are the uses of adopting formative evaluation ?

14. Construct frequency polygon for the two sets of data given below :

| ***Class interval (Marks)*** | ***Class A*** | ***Class B*** |
|---|---|---|
| 10 - 19 | 4 | 0 |
| 20 - 29 | 3 | 6 |
| 30 - 39 | 5 | 6 |
| 40 - 49 | 7 | 10 |
| 50 - 59 | 9 | 7 |
| 60 - 69 | 6 | 6 |
| 70 - 79 | 4 | 3 |
| 80 - 89 | 2 | 2 |

15. Discuss the significance of analysing and reporting the learner's performance.



institutes.aglasem.com
aglasem.com

DO NOT WRITE ANYTHING HERE



institutes.aglasem.com
aglasem.com

# Answer Key

institutes.aglasem.com
aglasem.com

# ಮಾದರಿ ಉತ್ತರಗಳು
# MODEL ANSWERS

ಸಂಕೇತ ಸಂಖ್ಯೆ : **322-EK**

**Code No. : 322-EK**

## ಡಿ.ಎಲ್.ಎಡ್. ಪ್ರಥಮ ವರ್ಷ
## D.El.Ed. FIRST YEAR
# ಶೈಕ್ಷಣಿಕ ಮೌಲ್ಯಾಂಕನ ಮತ್ತು ಮೌಲ್ಯಮಾಪನ
## EDUCATIONAL ASSESSMENT AND EVALUATION

**(ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ)**

**(Kannada & English Medium)**

ದಿನಾಂಕ : 09. 07. 2022 ]  [ ಗರಿಷ್ಠ ಅಂಕಗಳು : 30

Date : 09. 07. 2022 ]  [ Max. Marks : 30

**(ಕನ್ನಡ ಮಾಧ್ಯಮ)**

### ಭಾಗ – I

**ಬಹು-ಆಯ್ಕೆಯ ಉತ್ತರಗಳು : (ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ)**

**1 × 4 = 4**

1. (B) ರೂಪಣಾತ್ಮಕ ಮೌಲ್ಯಾಂಕನ

2. (C) ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

3. (A) ಸಾಮಾನ್ಯ ಸಂಭಾವ್ಯ ವಕ್ರರೇಖೆ

4. (A) ಕ್ರಿಯಾ ಸಂಶೋಧನೆ



institutes.aglasem.com
aglasem.com

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ : **2 × 3 = 6**

5. ***ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕಂಡುಬರುವ ಕಲಿಕಾ ಕೊಂಡಿಯ ಅಂಶಗಳನ್ನು ಸೂಚಿಸುವ ಚಿತ್ರ :***




2

6. ಆರೋಗ್ಯ ಮತ್ತು ದೈಹಿಕ ಶಿಕ್ಷಣ, ಸಾಮಾಜಿಕ ಉಪಯೋಗಿ ಉತ್ಪಾದನಾ ಕಾರ್ಯ, ಕಲಾಶಿಕ್ಷಣ, ಸಂಗೀತ ಇತ್ಯಾದಿ…

   ಮೌಲ್ಯಮಾಪನ ತಂತ್ರಗಳು ವೀಕ್ಷಣೆ, ಅಭಿಕ್ಷಮತೆ ಪರೀಕ್ಷೆಗಳು, ಆಸಕ್ತಿ ಪರೀಕ್ಷೆಗಳು ಮನೋಭಾವ ಮಾಪನಗಳು, ಸೃಜನಶೀಲತೆಯ ಪರೀಕ್ಷೆ ವ್ಯಕ್ತಿತ್ವದ ಪರೀಕ್ಷೆ ಮುಂತಾದವು. 1 + 1 = 2

7. ನಿರ್ದಿಷ್ಟ ಕ್ಷೇತ್ರದಲ್ಲಿ ವಿದ್ಯಾರ್ಥಿಯ ದೌರ್ಬಲ್ಯಗಳನ್ನು ನಿಖರವಾಗಿ ಪತ್ತೆಹಚ್ಚುವ ಪರೀಕ್ಷೆಗಳಿಗೆ ನೈದಾನಿಕ ಪರೀಕ್ಷೆಗಳೆಂದು ಹೆಸರು.

   ನೈದಾನಿಕ ಪರೀಕ್ಷೆಯ ಅಗತ್ಯತೆ

   - ವಿವಿಧ ವಿಷಯಗಳ ಕಲಿಕೆಯಲ್ಲಿ ವಿದ್ಯಾರ್ಥಿಗಳು ಎದುರಿಸುವ ತೊಂದರೆಗಳನ್ನು ಪತ್ತೆಹಚ್ಚಲು.
   - ಗುರಿ ಸಾಧನೆಯಾಗದಾಗ ವಿದ್ಯಾರ್ಥಿ ತೋರ್ಪಡಿಸಬೇಕಾದ ವರ್ತನೆಯ ಘಟಕಾಂಶಗಳನ್ನು ಗುರುತಿಸಿ ಯಾವ ಅಂಶಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ತೊಂದರೆ ಎದುರಿಸುತ್ತಿದ್ದಾನೆ ಎಂಬುದನ್ನು ಕಂಡುಕೊಳ್ಳಲು.

   (ಯಾವುದಾದರೂ ಎರಡು ಅಂಶಗಳಿಗೆ ½ ಅಂಕದಂತೆ) 1 + ½ + ½ = 2

8. ***ಸಂದರ್ಶನ ತಂತ್ರವನ್ನು ಬಳಸುವ ಸಂದರ್ಭಗಳು :***

   - ಸಂದರ್ಶನ ಅಂತರ್ಯದಲ್ಲಿ ಅವರಿಂದ ಪಡೆಯಬೇಕಾದ ಸಾಮಾನ್ಯ ಮಾಹಿತಿ



institutes.aglasem.com
aglasem.com

- ಕೌಟುಂಬಿಕ ಹಿನ್ನೆಲೆ
- ಶೈಕ್ಷಣಿಕ ಪರಿಸರ
- ಆಸಕ್ತಿ ಹವ್ಯಾಸಗಳು ಎದುರಿಸಿದ ಸಮಸ್ಯೆ / ಸವಾಲುಗಳು ಅವುಗಳನ್ನು ಎದುರಿಸಿದ ರೀತಿ, ಯಶಸ್ಸು ವೈಫಲ್ಯಗಳ ಇತ್ಯಾದಿಗಳ ಕುರಿತು ಮಾಹಿತಿಗಳನ್ನು ಪಡೆಯಬೇಕಾಗುತ್ತದೆ.

(ಯಾವುದಾದರೂ ನಾಲ್ಕು ಅಂಶಗಳಿಗೆ ½ ಅಂಕದಂತೆ) $4 \times ½ = 2$

9. ***ಪ್ರಕ್ರಿಯಾ ಮಾಪನವನ್ನು ಅಳೆಯಲು ಬಳಸುವ ಸಾಧನಗಳು :***

- ತಾಳೆಪಟ್ಟಿ
- ದರ್ಜಾ ಮಾಪಕ
- ಸಾಂದರ್ಭಿಕ ದಾಖಲಾಪತ್ರ
- ವೀಕ್ಷಣಾ ತಪಶೀಲು
- ಕೆ.ಡಬ್ಲ್ಯು.ಎಲ್. ಚಾರ್ಟ್
- ಕೃತಿ ಸಂಪುಟ

(ಯಾವುದಾದರೂ ನಾಲ್ಕು ಸಾಧನಗಳಿಗೆ ½ ಅಂಕದಂತೆ) $4 \times ½ = 2$

## ಭಾಗ – III

**ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ : $5 \times 4 = 20$**

10. ***ಹೊಸ ಮೌಲ್ಯಮಾಪನ ತಂತ್ರಗಳನ್ನು ವಿನ್ಯಾಸಗೊಳಿಸುವುದಕ್ಕೆ ಸಂಬಂಧಿಸಿದಂತೆ ಪೌಲ್‌ರವರು ಮಾಡಿರುವ ಶಿಫಾರಸ್ಸುಗಳು :***

- ಮೌಲ್ಯಮಾಪನ ಕಾರ್ಯಕ್ರಮಗಳು ಮುಂದುವರಿದ (ಹೆಚ್ಚಿನ) ಕಲಿಕೆಯನ್ನು ಉಂಟುಮಾಡಬೇಕು ಮತ್ತು ಉತ್ತೇಜಿಸಬೇಕು. ಕೇವಲ ಅದನ್ನು ಅಳೆಯುವುದು ಮಾತ್ರವಲ್ಲ.



institutes.aglasem.com
aglasem.com

- ಯಾವುದು ಮೌಲ್ಯವುಳ್ಳದ್ದೋ ಅದನ್ನು ಮೌಲ್ಯಮಾಪನವು ಅಳೆಯಬೇಕು. ಮತ್ತು ಶೀಘ್ರವಾಗಿ ಹಾಗೂ ಸುಲಭವಾಗಿ ಅಳೆಯುವ ಕೇವಲ ಕೌಶಲಗಳನ್ನಲ್ಲ.

- ಮೌಲ್ಯಮಾಪನವು ಕಲಿಕೆಯ ಒಂದು ಭಾಗವಾಗಬೇಕು. ಕೇವಲ ಕಲಿಕೆಯನ್ನು ಕೊನೆಗೊಳಿಸುವ ಭಾಗ ಅಥವಾ ಅಂತಿಮ ಘಟ್ಟವಲ್ಲ.

- ಮೌಲ್ಯಮಾಪನ ಕಾರ್ಯಕ್ರಮ ಅದರ ಆಧಾರಿತ ತತ್ವಗಳು, ಅದರ ಸಾಧನಗಳು, ಬಳಸಿದ ಉಪಕರಣಗಳು ಮತ್ತು ಫಲಿತಾಂಶಗಳನ್ನು ಎಲ್ಲಾ ಪಾಲುದಾರರಿಗೆ ಲಭ್ಯವಿರುವಂತೆ ಮುಕ್ತವಾಗಿಡಬೇಕು. ಅಂದರೆ ಇದು ಪಾರದರ್ಶಕವಾಗಿರಬೇಕು.

(ಪ್ರತಿಯೊಂದು ಅಂಶಕ್ಕೆ $1\frac{1}{4}$ ಅಂಕದಂತೆ) $4 \times 1\frac{1}{4} = 5$

11. ***ಕಲಿಕೆಯಲ್ಲಿ ವಿದ್ಯಾರ್ಥಿಗಳ ನ್ಯೂನತೆಯನ್ನು ತಿಳಿದ ನಂತರ ಶಿಕ್ಷಕ ಅಳವಡಿಸಿಕೊಳ್ಳಬಹುದಾದ ಪರಿಹಾರ ಕ್ರಮಗಳು :***

- *ವೈಯಕ್ತಿಕವಾದ ಶೈಕ್ಷಣಿಕ ಕಾರ್ಯಕ್ರಮ :* ಕಲಿಕಾರ್ಥಿಗಳು ಎದುರಿಸುತ್ತಿರುವ ಕಲಿಕಾ ಸಮಸ್ಯೆಗಳನ್ನು ಪರಿಹರಿಸಿಕೊಂಡು ತಮ್ಮ ಪರಿಪೂರ್ಣ ಸಾಮರ್ಥ್ಯಗಳನ್ನು ವಿಕಸನಗೊಳಿಸುವುದೇ ಆಗಿದೆ.

- *ಸಹಪಾಠಿಗಳ ಬೋಧನೆ / ಮನೆಪಾಠ :* ಶಿಕ್ಷಕರು ವಿವಿಧ ಸಾಮರ್ಥ್ಯಗಳನ್ನು ಹೊಂದಿರುವ ಕಲಿಕಾರ್ಥಿಗಳ ಗುಂಪನ್ನು ರಚಿಸಿ.

- *ಪುರಸ್ಕಾರ ಯೋಜನೆ :* ಪುರಸ್ಕಾರ ಯೋಜನೆಯು ಕಲಿಕಾರ್ಥಿಗಳಲ್ಲಿ ಧನಾತ್ಮಕ ಅಭಿಪ್ರೇರಣೆಯನ್ನು ಮೂಡಿಸುತ್ತವೆ.

- *ಅನುಷಂಗಿಕ ಕೌಶಲ್ಯಗಳ ವಿಕಸನ :* ಶಿಕ್ಷಕರು ಕಲಿಕಾರ್ಥಿಗಳಲ್ಲಿ ಉತ್ತಮವಾದ ಕಲಿಕೆಯ ಹವ್ಯಾಸಗಳು ಮತ್ತು ಮನೋಧೋರಣೆಗಳನ್ನು ವಿಕಸನಗೊಳಿಸಲು ಸಹಾಯ ನೀಡಬೇಕು.

- *ಕಲಿಕಾರ್ಥಿಗಳು ಸ್ವಯಂ ಕಲಿಕಾ ಕೌಶಲ್ಯಗಳ :* ತಳಹದಿ ಮತ್ತು ಸಮರ್ಥ್ಯಗಳನ್ನು ಪ್ರಾವೀಣ್ಯತೆಯನ್ನು ಹೊಂದಲು ಸಹಾಯ ನೀಡುವುದು.



institutes.aglasem.com
aglasem.com

- ಲಭ್ಯವಿರುವ ಮಾಹಿತಿ ತಂತ್ರಜ್ಞಾನವನ್ನು : ಶಿಕ್ಷಕರು ಅಭಿಪ್ರೇರಕವಾಗಿ ಬಳಸಿ ಅವುಗಳ ಮುಖಾಂತರ ಬೋಧಿಸಿ.
- ಕಲಿಕಾರ್ಥಿಗಳು ತಮ್ಮ ಸಮಸ್ಯೆಗಳನ್ನು ವಿವಿಧ ವಿಧಾನಗಳು : ಸಾಧನಗಳು ಅನುಭವಗಳ ಅಂತರಾವಲೋಕನ ನಿಘಂಟಿನ ಬಳಕೆಯನ್ನು ತಿಳಿಸುವುದು.
- ಉತ್ತಮವಾದ ಅಂತರ್ ವ್ಯಕ್ತಿಗಳ ಸಂಬಂಧಗಳನ್ನು ಸ್ಥಾಪಿಸಿಕೊಳ್ಳಲು ಕಲಿಕಾರ್ಥಿಗಳಿಗೆ ಶಿಕ್ಷಕರು ತರಬೇತಿಯನ್ನು ನೀಡಬೇಕು.
- ಕಲಿಕಾರ್ಥಿಗಳ ವರ್ತನಾ ಸಮಸ್ಯೆಗಳನ್ನು ಸೂಕ್ತವಾಗಿ ನಿರ್ವಹಿಸುವುದು.

(ಯಾವುದಾದರೂ ಐದು ಪರಿಹಾರಕ್ರಮಗಳನ್ನು ಹೆಸರಿಸಿ, ವಿವರಣೆಯೊಂದಿಗೆ ಇದ್ದರೆ) $5 \times 1 = 5$

12. ಸರಿಸಮಾನ ಬಳಕೆದಾರರು ಪಡೆಯುವ ಒಂದೇ ಫಲಿತಾಂಶದ ಪರಿಮಾಣವೇ ಮೌಲ್ಯಾಂಕನದ ವಸ್ತುನಿಷ್ಠತೆ.

***ವಸ್ತುನಿಷ್ಠ ಪ್ರಶ್ನೆಗಳಲ್ಲಿನ ವಿಧಗಳು :***

- ಉತ್ತರ ಬರೆಯುವ / ಒದಗಿಸುವ ಮಾದರಿ
- ಬಹು-ಆಯ್ಕೆಯ ಮಾದರಿ

***ಉತ್ತರ ಬರೆಯುವ ಮಾದರಿ :***

- ಬಿಟ್ಟ ಸ್ಥಳ ತುಂಬಿರಿ.
- ಪ್ರಶ್ನೆಗೆ ಒಂದೇ ವಾಕ್ಯದಲ್ಲಿ ಉತ್ತರಿಸಿ.
- ಅಪೂರ್ಣ ವಾಕ್ಯ ಪೂರ್ಣಗೊಳಿಸಿ.
- ಸಂಬಂಧವನ್ನು ಗ್ರಹಿಸಿ ಖಾಲಿ ಜಾಗವನ್ನು ಭರ್ತಿಮಾಡಿರಿ.
- ಕ್ರಮಬದ್ಧಗೊಳಿಸಿ.
- ಚಿತ್ರದ ಭಾಗಗಳನ್ನು ಗುರುತಿಸಿ.
- ನಕಾಶೆಯ ಪ್ರದೇಶಗಳನ್ನು ಗುರುತಿಸಿ.
- ಚಿತ್ರದಲ್ಲಿನ ದೋಷ ಗುರುತಿಸಿ.

***ಬಹು-ಆಯ್ಕೆ ಮಾದರಿ ವಿಧಗಳು :***

- ಅಪೂರ್ಣ ವಾಕ್ಯ ಪೂರ್ಣಗೊಳಿಸಿ. (3 ಅಥವಾ 4 ಉತ್ತರಗಳನ್ನು ನೀಡಲಾಗಿರುತ್ತದೆ)



institutes.aglasem.com
aglasem.com

- ಸಂಬಂಧ ಗ್ರಹಿಸಿ ಪೂರ್ಣಗೊಳಿಸಿ. (3 ಅಥವಾ 4 ಉತ್ತರಗಳನ್ನು ನೀಡಲಾಗಿರುತ್ತದೆ)
- ಜೋಡಣೆಯ ಪರೀಕ್ಷೆ
- ಕ್ರಮಬದ್ಧಗೊಳಿಸುವ ಪರೀಕ್ಷೆ (ಅನುಕ್ರಮ, ಏರಿಕೆ, ಇಳಿಕೆ)
- ಚಿತ್ರನಕ್ಷೆಯಲ್ಲಿ ಭಾಗ / ಪ್ರದೇಶ ಗುರುತಿಸುವ ಪರೀಕ್ಷೆ (3 ಅಥವಾ 4 ಉತ್ತರಗಳನ್ನು ನೀಡಲಾಗಿರುತ್ತದೆ)
- ಆ ಗುಂಪಿಗೆ ಸೇರದಂತಹದನ್ನು ಗುರುತಿಸುವುದು.

| | |
|---|---|
| ಅರ್ಥ + ವಿಧಗಳಿಗೆ | 1 |
| ಉತ್ತರ ಬರೆಯುವ ಯಾವುದಾದರೂ ನಾಲ್ಕು ವಿಧಕ್ಕೆ ½ ಅಂಕದಂತೆ | 4 × ½ = 2 |
| ಬಹು-ಆಯ್ಕೆ ನಾಲ್ಕು ವಿಧಕ್ಕೆ ½ ಅಂಕದಂತೆ | 4 × ½ = 2 |

13. ಶೈಕ್ಷಣಿಕ ವರ್ಷದ ಆರಂಭದಿಂದ ಹಿಡಿದು ವರ್ಷದ ಅಂತ್ಯದವರೆಗೂ ವ್ಯವಸ್ಥಿತವಾಗಿ ಹಾಗೂ ನಿರಂತರವಾಗಿ ನಡೆಸಿ (ಟೆಸ್ಟ್, ಮಾಸಿಕ, ತ್ರೈಮಾಸಿಕ, ಷಣ್ಮಾಷಿಕ, ವಾರ್ಷಿಕ ಪರೀಕ್ಷೆ) ಹಾಗೂ ಬೋಧಿಸಿದ ಅಧ್ಯಾಯದ ಕೊನೆಯಲ್ಲಿ ಪರೀಕ್ಷೆ ನಡೆಸುವುದರ ಮೂಲಕ ಹಿಮ್ಮಾಹಿತಿ ನೀಡುತ್ತಾ ಬೋಧನೆ ಕಲಿಕೆಯ ಪರಿಣಾಮವನ್ನು ಮೌಲ್ಯಮಾಪನ ಮಾಡುವ ಕ್ರಮಕ್ಕೆ ರೂಪಣಾತ್ಮಕ ಮೌಲ್ಯಮಾಪನ ಎನ್ನುವರು.

*ಉಪಯುಕ್ತತೆಗಳು :*

- ಶಿಕ್ಷಣದ ಗುರಿಗಳತ್ತ ಸಾಗುವಲ್ಲಿ ಸುಲಭವಾಗಿ ನೆರವಾಗುತ್ತದೆ.
- ವಿದ್ಯಾರ್ಥಿಗಳು ಸೂಕ್ತವಾಗಿ ಮತ್ತು ಸ್ಪಷ್ಟವಾಗಿ ವಿಷಯ ಕಲಿಯುವಂತೆ ಇದು ನಿರಂತರವಾಗಿ ಪ್ರೋತ್ಸಾಹಿಸುವುದು.
- ಯಾಂತ್ರಿಕ ಬೋಧನೆ ತಪ್ಪುತ್ತದೆ.
- ಬೋಧನೆ ಪರಿಣಾಮಕಾರಿಯಾಗಿಸುವ ಮೂಲಕ ಕಲಿಯುವವನ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿಸುತ್ತದೆ.
- ಮೊದಲ ಕಪ್ಪನ್ನು ತಿದ್ದಿಕೊಂಡು ಕಲಿಯಲು ನಾಲ್ಕು ಉಪಯುಕ್ತತೆಗೆ.

| | |
|---|---|
| ನಾಲ್ಕು ಉಪಯುಕ್ತತೆಗೆ | 4 × 1 = 4 |
| ಅರ್ಥಕ್ಕೆ | 1 × 1 = 1 |



institutes.aglasem.com
aglasem.com

14. ಸ್ಕೇಲ್ ನಮೂದಿಸುವುದಕ್ಕೆ 1 ಅಂಕ

A ನಕ್ಷೆ ಎಳೆಯುವುದಕ್ಕೆ 2 ಅಂಕಗಳು

B ನಕ್ಷೆ ಎಳೆಯುವುದಕ್ಕೆ 2 ಅಂಕಗಳು






institutes.aglasem.com
aglasem.com

15. ***ಕಲಿಕಾರ್ಥಿಗಳ ಕಾರ್ಯಕ್ಷಮತೆಯನ್ನು ವಿಶ್ಲೇಷಿಸುವ ಹಾಗೂ ವರದಿ ಮಾಡುವ ಅಗತ್ಯ :***

- ಪ್ರತಿಯೊಬ್ಬ ಕಲಿಕಾರ್ಥಿಯ ಕಾರ್ಯಕ್ಷಮತೆಯ ಮಟ್ಟವೇನು ?
- ತರಗತಿಯಲ್ಲಿನ ಕಲಿಕಾರ್ಥಿಗಳ ಕಾರ್ಯಕ್ಷಮತೆಯ ಮಟ್ಟವೇನು ?
- ಮೌಲ್ಯಾಂಕನಗೊಳಿಸಿದ ಕಲಿಕಾರ್ಥಿಗಳ ಗುಂಪು ಕಾರ್ಯಕ್ಷಮತೆಯಲ್ಲಿ ಏಕರೂಪ ಅಥವಾ ವೈವಿಧ್ಯತೆಯನ್ನು ಹೊಂದಿವೆಯೇ ?
- ಸಮೂಹದಲ್ಲಿರುವ ಎಷ್ಟು ಕಲಿಕಾರ್ಥಿಗಳು ಉನ್ನತ ಮಟ್ಟ, ಸರಾಸರಿಮಟ್ಟ, ಕಳಪೆ ಮಟ್ಟದಲ್ಲಿದ್ದಾರೆ ?
- ಹಿಂದೆಗಿಂತ ಈ ಬಾರಿಯ ಫಲಿತಾಂಶವು ಸುಧಾರಣೆಗೊಂಡಿದೆಯೇ ?
- ಒಂದು ಗುಂಪಿನ ಕಾರ್ಯಕ್ಷಮತೆಯ ಮತ್ತೊಂದು ಹೋಲಿಕೆಯ ಗುಂಪಿನ ಕಾರ್ಯಕ್ಷಮತೆಯಲ್ಲಿ ಉತ್ತಮವೋ ಅಥವಾ ಕಳಪೆಯೇ ?

ಈ ಎಲ್ಲಾ ಅಂಶಗಳಿಂದ ಉತ್ತರಪಡೆಯಬಹುದಾಗಿದೆ.

(ಯಾವುದಾದರೂ ಐದು ಅಂಶಗಳಿಗೆ 1 ಅಂಕದಂತೆ) $5 \times 1 = 5$



institutes.aglasem.com

aglasem.com

**( English Version )**

**PART – I**

**Choose the correct alternatives for the following :**

**1 × 4 = 4**

1. (B) Formative assessment 1

2. (C) Primary and secondary education 1

3. (A) Normal probability curve 1

4. (A) Action research 1

**PART – II**

**Answer any *three* of the following questions :** **2 × 3 = 6**

5. The diagram which depicts the linkages between the components as well as the continuity existing in the process of evaluation is




2

6. Health and physical education, socially useful productive work, art education and music etc.

Techniques to evaluate, observation, aptitude tests, interest tests (inventories), emotional tests, creativity tests, personality test etc.

1 + 1 = 2



institutes.aglasem.com
aglasem.com

7. Diagnostic tests are the tests to identify / detect the students' weaknesses accurately in a particular field.

   1. Diagnostic tests are the tests used by the teachers to identify the difficulties faced by the students in learning different subjects.
   2. When the goal is not achieved and to find out in which aspect, the student is experiencing difficulties.

   (Any other *two* points $\frac{1}{2}$ mark each) $1 + \frac{1}{2} + \frac{1}{2} = 2$

8. — information need to be collected regarding the general information

   — family background

   — educational environment

   — interest, hobbies, issues / challenges faced

   — the way they were faced, success / failures

   ( Any *four* $\frac{1}{2}$ mark each ) $\frac{1}{2} \times 4 = 2$

9. The tools used to measure process evaluation are

   — check list

   — rating scale

   — anecdotal record

   — observation checklist

   — KWL chart

   — student portfolio.

   (Any *four* $\frac{1}{2}$ mark each) $\frac{1}{2} \times 4 = 2$



institutes.aglasem.com
aglasem.com

## PART – III

**Answer any *four* of the following questions :** **$5 \times 4 = 20$**

10. Paula makes the following recommendations for designing new evaluation strategies :

    1. Evaluation programmes are to encourage and lead learning, not just measure it
    2. Evaluation has to measure what is valued and not just those skills that are quick and easy to measure
    3. Evaluation should be a part of learning and not just the concluding or terminating part of learning
    4. Evaluation program, its underlying principles, its tools, instruments used and results should be openly available to all stakeholders, *i.e.* it should be transparent.

    (Each point carries $1\frac{1}{4}$ marks) $1\frac{1}{4} \times 4 = 5$

11. Remedial measures teachers can adopt are :

    1. Individualized Educational Programme :

       Helps learners to overcome their learning difficulties and develop their potentials.

    2. Peer tutoring :

       Teacher can make use of grouping of learners with different abilities.

    3. Reward scheme :

       Positive effect in enhancing learner's motivation.

    4. Development of generic skills :

       Teacher should help learners to develop good learning habits and attitudes.

    5. Basic self-learning skill and abilities :

       Teachers may teach them how to set appropriate learning objectives and priorities.



institutes.aglasem.com

aglasem.com

6. Information technology to motivate and teach :

   Help them cultivate the habit of self-learning.

7. Solve problems by different methods :

   Develops learners' flexibility, creativity and independent thinking.

8. To establish good interpersonal relationship :

   Facilitate effective communication and collaboration.

9. Handling the learners' behavioural problems.

(Write any *five* names with explanation) $1 \times 5 = 5$

12. The objectivity in assessment means the degree to which equally competent learners get the same result.

Types of objective type questions :

1. The answer writing / providing type
2. Multiple choice type.

Providing the answer type

1. Fill in the blanks
2. Answer the question in one sentence
3. Understand the relationship and fill in the blank
4. Systematise
5. Complete the incomplete sentence
6. Identify parts of the picture
7. Identify map areas
8. Identify the error in the picture.

Multiple choice questions

1. Complete the incomplete sentence

   (3 or 4 answers are given)

2. Complete the relationship

   ( 3 or 4 answers are given)



institutes.aglasem.com

aglasem.com

3. Arranging test
4. Validation / systematise test (sequence, increasing, decreasing)
5. Picture / Map Area identification test ( 3 or 4 answers)
6. Identifying what does not belong to that group

Def + type 1 mark

Providing answer type any *four* $\frac{1}{2} \times 4 = 2$

Multiple choice $\frac{1}{2} \times 4 = 2$

$1 + 2 + 2 = 5$

13. Formative evaluation is a procedure of knowing the effect of teaching-learning by giving feedback through conducting unit test, monthly test, trimester, semester and annual exam. systematically and continuously from the beginning of the academic year till the end of the academic year.

<u>Uses</u> :

1. It helps easily to reach educational aims
2. It encourages students continuously to learn the subject clearly and relevantly
3. Avoids mechanical teaching
4. It makes learning more effective by making teaching effectively
5. To learn by correcting the first mistake.

Any *four* uses $1 \times 4 = 4$

Def $1 \times 1 = 1$ $4 + 1 = 5$



institutes.aglasem.com

aglasem.com

14. Mentioning scale : 1 mark

Plotting graph *A* : 2 marks

Plotting graph *B* : 2 marks Total = 5 marks






institutes.aglasem.com
aglasem.com

15. The significance of analysing and reporting the learner's performance

- What is the level of performance of each learner ?
- What is the position of each learner in the class ?
- Is the group of learners homogeneous with regard to performance assessed ?
- How many in the group are high achievers, average achievers and low achievers ?
- Has the performance of the learner bettered in comparison with the previous one ?
- Do the performance of this group is better than or worse than the other group ?

(Getting answer) (Any *five*) $1 \times 5 = 5$



institutes.aglasem.com

aglasem.com